# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 241(275) |
| ಸದಸ್ಯರ ಹೆಸರು : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು: | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |
| ಉತ್ತರಿಸಬೇಕಾದ ದಿನಾಂಕ: | 29.01.2026 |
| **ಪ್ರಶ್ನೆ** | **ಉತ್ತರ** |
| (ಅ) 2025ರ ಆರಂಭದಲ್ಲಿ ನವೋದ್ಯಮ ನಿಧಿಯಲ್ಲಿನ (Startup funding) ವರದಿಯಾದ ಕುಸಿತದ ಹಿನ್ನೆಲೆಯಲ್ಲಿ ವಿಶೇಷವಾಗಿ "ಎಲಿವೇಟ್" ಕಾರ್ಯಕ್ರಮದ ಅಡಿಯಲ್ಲಿರುವ ಆರಂಭಿಕ ನವೋದ್ಯಮಗಳು (Startup) ಸಕಾಲಿಕ ಅನುದಾನವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ; | "ಎಲಿವೇಟ್ (ELEVATE)" ಕಾರ್ಯಕ್ರಮದ ಅಡಿಯಲ್ಲಿ ಕರ್ನಾಟಕ ಸರ್ಕಾರವು ಪ್ರಾರಂಭಿಕ ಹಂತದ ನವೋದ್ಯಮಗಳಿಗೆ ತಮ್ಮ ಆಲೋಚನೆಗಳನ್ನು Proof of Concept ಹಂತಕ್ಕೆ ಅಭಿವೃದ್ಧಿಪಡಿಸಿ, ಉತ್ಪನ್ನ/ಪರಿಹಾರವನ್ನು ವಿಸ್ತರಿಸಲು ರೂ. 5 0 ಲಕ್ಷಗಳವರೆಗೆ (Grant-in-Aid) ಒಂದು ಬಾರಿಯ ಸಹಾಯಾನುದಾನ ಒದಗಿಸುತ್ತದೆ.<br><br>ಈ ಕಾರ್ಯಕ್ರಮದ ಭಾಗವಾಗಿ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿತವಾಗಿರುವ ಕೆ-ಟೆಕ್ ಇನ್ಕ್ಯುಬೇಷನ್ ಕೇಂದ್ರಗಳಿಗೆ ನಿಯೋಜಿಸುವ ಮೂಲಕ ಸದರಿ ನವೋದ್ಯಮಗಳ ಪ್ರಗತಿಯ ಮೇಲ್ವಿಚಾರಣೆ, ಯೋಜನೆಯ ಮೈಲಿಗಲ್ಲುಗಳ ಪರಿಶೀಲನೆ, ಅನುದಾನ ಉಪಯೋಗಿತಾ ಪ್ರಮಾಣ ಪತ್ರಗಳ ಪೂರ್ಣ ಪರಿಶೀಲನೆ ಹಾಗೂ ಮಾಸಿಕ ಪರಿಶೀಲನಾ ಸಮಿತಿ ಸಭೆಗಳನ್ನು ನಡೆಸುವುದರ ಮೂಲಕ ಆರಂಭಿಕ ನವೋದ್ಯಮಗಳು ಸಕಾಲಿಕ ಅನುದಾನವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ. |
| (ಆ) Centre for Applied AI for Tech Solutions '(CATS) ನ ಸ್ಥಿತಿಗತಿ ಏನು ಮತ್ತು ಎಐ-ಚಾಲಿತ ಆಡಳಿತವು ಬೆಂಗಳೂರು ನಗರ ತಂತ್ರಜ್ಞಾನ ಕೇಂದ್ರಕ್ಕೆ ಮಾತ್ರವಲ್ಲದೇ ಗ್ರಾಮೀಣ ಪ್ರದೇಶಗಳಿಗೂ ಪ್ರಯೋಜನವನ್ನು ನೀಡುತ್ತದೆ ಎಂದು ಸರ್ಕಾರ ಹೇಗೆ ಖಚಿತಪಡಿಸುತ್ತಿದೆ; | NASSCOMನ ಸಹಯೋಗದಲ್ಲಿ AI - ಉತ್ಕೃಷ್ಟತಾ ಕೇಂದ್ರದ (CATS) ಸ್ಥಾಪನೆಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ನಿಗದಿತ ಅನುದಾನದ ಭಾಗವಾಗಿ ಅನುದಾನ ಬಿಡುಗಡೆ ಕೋರಿ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.<br><br>ಸರ್ಕಾರವು ಎಐ-ಚಾಲಿತ ಆಡಳಿತವನ್ನು ಬೆಂಗಳೂರು ನಗರದ ತಂತ್ರಜ್ಞಾನ ಕೇಂದ್ರಗಳಿಗೆ ಮಾತ್ರ ಸೀಮಿತಗೊಳಿಸದೇ, ರಾಜ್ಯದ ಗ್ರಾಮೀಣ ಪ್ರದೇಶಗಳಿಗೂ ಪ್ರಯೋಜನಗಳನ್ನು ವಿಸ್ತರಿಸುವ ದೃಷ್ಟಿಯಿಂದ ಈ ಕೆಳಗಿನಂತೆ ಕಾರ್ಯತಂತ್ರ ರೂಪಿಸಿಕೊಂಡಿದೆ:- |

| | |
|---|---|
| | • ಕೈಗಾರಿಕಾ ಕ್ಲಸ್ಟರ್‌ಗಳು ಮತ್ತು ಬಳಕೆದಾರ ಜಾಲಗಳಲ್ಲಿ ಎಐ ಪರಿಹಾರಗಳನ್ನು ಅನುಷ್ಠಾನಗೊಳಿಸುವುದು.<br>• ಓಪನ್ ಇನೋವೇಶನ್ ಚಾಲೆಂಜ್‌ಗಳ ಮೂಲಕ ರಾಜ್ಯದ ವಿವಿಧ ಭಾಗಗಳಿಂದ ಸಮಸ್ಯೆಗಳ ಗುರುತಿಸುವಿಕೆ.<br>• ಜಿಲ್ಲಾ ಮತ್ತು ಗ್ರಾಮೀಣ ಮಟ್ಟದಲ್ಲಿ ಜಾಗೃತಿ ಕಾರ್ಯಾಗಾರಗಳು ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>• ಸಾರ್ವಜನಿಕ ಸೇವಾ ವೇದಿಕೆಗಳಲ್ಲಿ ಎಐ ಅನ್ವಯಿಕೆಗಳನ್ನು ಬಳಸುವ ಮೂಲಕ ಆರೋಗ್ಯ, ಉತ್ಪಾದನೆ, ಲಾಜಿಸ್ಟಿಕ್ಸ್ ಮುಂತಾದ ಕ್ಷೇತ್ರಗಳಲ್ಲಿ ಸಮಗ್ರ ಡಿಜಿಟಲ್ ಪರಿವರ್ತನೆ. |
| (ಇ) ಹೊಸ 2025-30 ಐಟಿ ನೀತಿಯು ಡೀಪ್ ಟೆಕ್, ಎಐ ಮತ್ತು ಸೈಬರ್ ಭದ್ರತೆಯ ಮೇಲೆ ಕೇಂದ್ರಿಕರಿಸುತ್ತಿದೆ. ಎಐ- ರಚಿತವಾದ ಡೀಪ್ ಫೇಕ್‌ಗಳು ಮತ್ತು ಸೈಬರ್ ದಾಳಿಗಳಿಂದ ಸ್ಥಳೀಯ ವ್ಯವಹಾರಗಳನ್ನು ರಕ್ಷಿಸಲು ನಿರ್ಧಿಷ್ಟ ಕಾರ್ಯಕ್ರಮಗಳು ಇವೆಯೇ; | ಎಐ-ರಚಿತವಾದ ಡೀಪ್ ಫೇಕ್ ಗಳು ಮತ್ತು ಸೈಬರ್ ದಾಳಿಗಳಿಂದ ಸ್ಥಳೀಯ ವ್ಯವಹಾರಗಳನ್ನು ರಕ್ಷಿಸಲು ಸರ್ಕಾರವು ಪ್ರಕಟಿಸಿರುವ ಸೈಬರ್ ಸೆಕ್ಯೂರಿಟಿ ಪಾಲಿಸಿಯಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳು ಇವೆ. |
| (ಈ) ರಾಷ್ಟ್ರೀಯ ಜೈವಿಕ ಆರ್ಥಿಕತೆಯಲ್ಲಿ ರಾಜ್ಯವು ಶೇ.21ರಷ್ಟು ಕೊಡುಗೆ ನೀಡುತ್ತಿದ್ದು, ಮೆಡ್-ಟೆಕ್ ಮತ್ತು ಹೆಲ್ತ್-ಟೆಕ್ ಕ್ಷೇತ್ರಗಳಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಿಸಲು ಯಾವ ನಿರ್ದಿಷ್ಟ ಪ್ರೋತ್ಸಾಹಕಗಳನ್ನು ಒದಗಿಸಲಾಗುತ್ತಿದೆ? | ರಾಷ್ಟ್ರೀಯ ಜೈವಿಕ ಆರ್ಥಿಕತೆಯಲ್ಲಿ ರಾಜ್ಯವು ಶೇ.21ರಷ್ಟು ಕೊಡುಗೆ ನೀಡುತ್ತಿದ್ದು, ಮೆಡ್-ಟೆಕ್ ಮತ್ತು ಹೆಲ್ತ್-ಟೆಕ್ ಕ್ಷೇತ್ರಗಳಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಿಸಲು ಸರ್ಕಾರವು ಪ್ರಕಟಿಸಿರುವ ಜೈವಿಕ ತಂತ್ರಜ್ಞಾನ ಪಾಲಿಸಿಯಲ್ಲಿ ಈ ಕೆಳಕಂಡ ಪ್ರೋತ್ಸಾಹಕಗಳನ್ನು ಒದಗಿಸಲಾಗಿದೆ.<br><u>ಪ್ರೋತ್ಸಾಹಕಗಳು:</u><br>1. ನವೋದ್ಯಮಗಳು - ನವೋದ್ಯಮಗಳಿಗೆ ಹಣಕಾಸಿನ ಪ್ರೋತ್ಸಾಹ<br>ಪ್ರೋತ್ಸಾಹಕಗಳ ವರ್ಗಗಳು - ರಾಜ್ಯ GST ಮರುಪಾವತಿ, ಮಾರ್ಕೆಟಿಂಗ್ ವೆಚ್ಚ ಮರುಪಾವತಿ, ಪೇಟೆಂಟ್ ಫೈಲಿಂಗ್ ವೆಚ್ಚ ಮರುಪಾವತಿ, ಗುಣಮಟ್ಟ ಪ್ರಮಾಣೀಕರಣ ವೆಚ್ಚ ಮರುಪಾವತಿ, ಪರಿಪೋಷಣಾ/ ವೇಗವರ್ಧಕ ಕೇಂದ್ರಕ್ಕೆ ಬಂಡವಾಳ ವೆಚ್ಚ ಮರುಪಾವತಿ.<br>2. ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ MSME ಹಣಕಾಸಿನ ಪ್ರೋತ್ಸಾಹ: ಪೇಟೆಂಟ್ ಫೈಲಿಂಗ್ ವೆಚ್ಚ |

| | |
|---|---|
| | ಮರುಪಾವತಿ, ಮಾರ್ಕೆಟಿಂಗ್ ವೆಚ್ಚ ಮರುಪಾವತಿ, ಪರೀಕ್ಷೆ/ಪ್ರಮಾಣೀಕರಣ ವೆಚ್ಚ ಮರುಪಾವತಿ, ಮೂಲಮಾದರಿ ವೆಚ್ಚ ಮರುಪಾವತಿ, ಬಡ್ಡಿ ಸಬ್ಸಿಡಿ, ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ, ಭೂ ಪರಿವರ್ತನೆ ಪ್ರೋತ್ಸಾಹ ಧನ, ವಿದ್ಯುತ್ ಸುಂಕದ ದರ ರಿಯಾಯಿತಿ.<br><br>**3.** ಬೃಹತ್ ಕೈಗಾರಿಕೆಗಳು:<br>STP ಅಭಿವೃದ್ಧಿ ಮರುಪಾವತಿ, ಮಳೆ ನೀರು ಕೊಯ್ಲು ವೆಚ್ಚ ಮರುಪಾವತಿ, ಬಡ್ಡಿ ಸಬ್ಸಿಡಿ, ಭೂ ಪರಿವರ್ತನೆ ಪ್ರೋತ್ಸಾಹ ಧನ, ಉತ್ಪಾದನೆ ಸಂಬಂಧಿತ ಪ್ರೋತ್ಸಾಹ (**PLI**), ಪೇಟೆಂಟ್ ಫೈಲಿಂಗ್ ವೆಚ್ಚ ಮರುಪಾವತಿ, ವಿದ್ಯುತ್ ಸುಂಕದ ದರ ರಿಯಾಯಿತಿ, ಮಾರ್ಕೆಟಿಂಗ್ ವೆಚ್ಚ ಮರುಪಾವತಿ. |

(ಐಟಿಬಿಟಿ 9 ಎಲ್‌ಸಿಎಂ 2025)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು